

# ನೀರಿನಾಟಕ್ಕೆ ನಿಪ್ಲಿ

**ಉತ್ತರಕನ್ನಡದ ನಿಪ್ಲಿ ದೂರ ನಿಂತು ನೋಡಬೇಕಾದ ಜಲಪಾತವಲ್ಲ, ಸನಿಹಕ್ಕೆ ಹೋಗಿ ನೀರಾಟದಲ್ಲಿ ಮೈಮರೆಯುವಂತಹದ್ದು.**

■ ಹ.ಸ. ಬ್ಯಾಕೋಡ

ಮಳೆಗಾಲ ಆರಂಭವಾಗುತ್ತಿದ್ದಂತೆ ಮೈದುಂಬಿಕೊಂಡು ಕಂಗೊಳಿಸುವ ಜಲಪಾತಗಳು ಉತ್ತರಕನ್ನಡ ಜಿಲ್ಲೆಯ ಪ್ರತಿಯೊಂದು ತಾಲ್ಲೂಕಿನಲ್ಲಿಯೂ ಇವೆ. ನಮ್ಮ ರಾಜ್ಯದಲ್ಲಿ ಅತಿ ಹೆಚ್ಚು ಜಲಪಾತಗಳಿರುವುದು ಉತ್ತರಕನ್ನಡ ಜಿಲ್ಲೆಯಲ್ಲಿಯೇ. ಚಳಿಗಾಲದ ಅಂತ್ಯದವರೆಗೂ ಪ್ರವಾಸಿಗರನ್ನು ಸೆಳೆಯುವಂತಹ ಅನೇಕ ಜಲಪಾತಗಳು ಹಸಿರು ಕಾಡಿನ ಮಧ್ಯದಲ್ಲಿವೆ. ಅವುಗಳನ್ನು ಕಾಣಲು ಕಾಲ್ನಡಿಗೆಯಲ್ಲಿ ಕ್ರಮಿಸಬೇಕು. ಕೆಲವೇ ಕೆಲವು ಜಲಪಾತಗಳು ಮಾತ್ರ ಹಸಿರು ಕಾಡಿನ ಮಧ್ಯದಲ್ಲಿದ್ದರೂ ಸಹ ರಸ್ತೆಯ ಪಕ್ಕದಲ್ಲಿಯೇ ಇವೆ. ಅಂತಹ ಜಲಪಾತಗಳಲ್ಲಿ ಪ್ರಮುಖವಾದುದು ‘ನಿಪ್ಲಿ’ ಜಲಪಾತ.

‘ನಿಪ್ಲಿ’ ಒಂದು ವಿಶೇಷವಾದ ಜಲಪಾತವೇ ಸರಿ. ದಟ್ಟವಾದ ಕಾಡಿನ ಮಧ್ಯದಲ್ಲಿದ್ದರೂ ಪ್ರವಾಸಿಗರು ಕಾಲ್ನಡಿಗೆಯಲ್ಲಿ ಸಾಗಿ ದಣಿಯುವ ಅಗತ್ಯವಿಲ್ಲ. ರಸ್ತೆಯ ಪಕ್ಕದಲ್ಲಿ ವಾಹನಗಳನ್ನು ನಿಲ್ಲಿಸಿ ಕೇವಲ ಎರಡು ನಿಮಿಷಗಳ ಕಾಲ ಹೆಜ್ಜೆ ಹಾಕಿದರೆ ಸಾಕು, ಜಲಪಾತ ಕಣ್ಣಿಗೆ ಬೀಳುತ್ತದೆ.

ಕಡಿಮೆ ಎತ್ತರದ ‘ನಿಪ್ಲಿ’ ಜಲಪಾತವನ್ನು ಹತ್ತಿರದಿಂದ ಕಣ್ತುಂಬಿಕೊಳ್ಳಬಹುದು. ಪ್ರತಿಯೊಬ್ಬರೂ ಜಲಪಾತದ ಬಳಿಗೆ ಹೋಗಿ ಮನಸಾರೆ ನೀರಿನಾಟ ಆಡಬಹುದು.

ಉತ್ತರಕನ್ನಡ ಜಿಲ್ಲೆಯ ಸಿದ್ದಾಪುರ ಪಟ್ಟಣದಿಂದ ಸುಮಾರು 12 ಕಿ.ಮೀ. ದೂರದಲ್ಲಿರುವ ನಿಪ್ಲಿ ಎನ್ನುವ ಗ್ರಾಮದ ಸಮೀಪದಲ್ಲಿ ಈ ಜಲಪಾತವಿದೆ. ಗ್ರಾಮದ ಹೆಸರಿನಿಂದಲೇ ಜಲಪಾತವನ್ನೂ ಕರೆಯುತ್ತಾರೆ.

ಗ್ರಾಮದ ಸಮೀಪದಲ್ಲಿ ರೈತರ ಬೇಸಾಯಕ್ಕೆ ಅನುಕೂಲವಾಗುವಂತೆ ನಿರ್ಮಾಣಗೊಂಡ ಹುಸೂರು ಅಣೆಕಟ್ಟಿನ ಹಿನ್ನೀರಿನಿಂದಾಗಿ ಈ ಜಲಪಾತ ಉದ್ಭವವಾಗಿದೆ. ಒಂದಿಷ್ಟು ದೂರ ನೆಲದ ಮೇಲೆ ಹರಿದುಹೋಗುವ ಹಿನ್ನೀರು, ಒಂದೆಡೆ ಸುಮಾರು ಹತ್ತು ಅಡಿಗಳಷ್ಟು ಎತ್ತರದ ಕಲ್ಲುಗಳ ಮೇಲಿಂದ ಧುಮುಕುತ್ತದೆ. ಹಾಗೆ ಧುಮುಕುವ ನೀರು ಪುಟ್ಟ ನದಿಯಂತೆ ಜುಳುಜುಳು ಹರಿದುಕೊಂಡು ಹೋಗುತ್ತದೆ. ಆ ನೀರನ್ನು ನೋಡುವ ಯಾವ ಪ್ರವಾಸಿಯೂ ತೆಪ್ಪಗೆ ನಿಂತು ನೋಡಲು ಸಾಧ್ಯವೇ ಇಲ್ಲ. ಒಂದು ಕ್ಷಣ ನೀರಿಗಿಳಿಯಬೇಕು, ಕಲ್ಲು ಬಂಡೆಗಳ ಮೇಲಿಂದ ಧುಮುಕುವ ಜಲಪಾತದ ಅಡಿಯಲ್ಲಿ ನಿಂತು ನೆನೆದು ಸಂಭ್ರಮಿಸಬೇಕು ಎನ್ನುವ ಆಸೆ ಹುಟ್ಟುವುದು ನಿಜ.

ಬೇಸಿಗೆಯಲ್ಲಿ ಸಂಪೂರ್ಣವಾಗಿ ಬರಿದಾಗುವ ಈ ಜಲಪಾತ ಪ್ರಸ್ತುತ ಮೈದುಂಬಿ ಧುಮುಕುತ್ತಿದೆ.

ನಿಪ್ಲಿ ಜಲಪಾತದ ದಾರಿ ನಕ್ಷೆಗೆ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

ಅಕ್ಟೋಬರ್ ತಿಂಗಳ ಅಂತ್ಯದವರೆಗೂ ಜಲಪಾತದ ಸೊಬಗನ್ನು ಸವಿಯಬಹುದು. ಜಲಪಾತದ ಹತ್ತಿರದವರೆಗೂ ವಾಹನಗಳಲ್ಲಿ ಹೋಗುವಷ್ಟು ವ್ಯವಸ್ಥಿತವಾದ ರಸ್ತೆ ಇದೆ. ಜಲಪಾತದ ಬಳಿಯಲ್ಲಿ ಪ್ರವಾಸಿಗರಿಗೆ ತಿನ್ನಲು ತಿಂಡಿ, ತಿನಿಸುಗಳ ಹಾಗೂ ಕಾಫಿ, ಟೀ ಪಾನೀಯಗಳ ಅಂಗಡಿಗಳಿವೆ.

ಪ್ರವಾಸಿಗರು ಈ ಜಲಪಾತವನ್ನು ತಲುಪಲು ಎರಡು ಮೂರು ಮಾರ್ಗಗಳಿವೆ. ಮೈಸೂರು ಮತ್ತು ಬೆಂಗಳೂರಿನಿಂದ ಹೋಗುವವರು ಶಿವಮೊಗ್ಗ, ಸಾಗರದ ಮಾರ್ಗವಾಗಿ ತಾಳಗುಪ್ಪದಿಂದ ಹೋಗಬಹುದು. ತಾಳಗುಪ್ಪ ರೈಲ್ವೆ ನಿಲ್ದಾಣದಿಂದ ಸುಮಾರು 16 ಕಿ.ಮೀ. ದೂರದಲ್ಲಿ ಜಲಪಾತವಿದೆ. ತಾಳಗುಪ್ಪದವರೆಗೆ ರೈಲಿನಲ್ಲಿ ಬರುವ ಪ್ರವಾಸಿಗರು ಜೋಗ–ಹೊನ್ನಾವರ ರಸ್ತೆಯಲ್ಲಿ ಹೊರಟು, ಅಡುಕಟ್ಟಾ ಗ್ರಾಮವನ್ನು ತಲುಪಬೇಕು. ಅಲ್ಲಿಂದ ಹಲಗೇರಿ ರಸ್ತೆಯಲ್ಲಿ ಸುಮಾರು ಆರೇಳು ಕಿ.ಮೀ. ಕ್ರಮಿಸಿದರೆ ಜಲಪಾತ ಕಾಣಸಿಗುತ್ತದೆ.

ಹುಬ್ಬಳ್ಳಿ–ಧಾರವಾಡದ ಕಡೆಯಿಂದ ಬರುವ ಪ್ರವಾಸಿಗರು ಶಿರಸಿಯಿಂದ ಸಿದ್ದಾಪುರದ ಕಡೆಯಿಂದ ಮಾವಿನಗುಂಡಿಯ ಮೂಲಕ ಆರೇಳು ಕಿ.ಮೀ. ದೂರ, ಅಡುಕಟ್ಟಾ ಗ್ರಾಮದ ಮಾರ್ಗವಾಗಿ ಒಂಬತ್ತು ಕಿ.ಮೀ. ದೂರ ಸಾಗಿದರೆ ಜಲಪಾತವನ್ನು ತಲುಪಬಹುದು.

ನಿಪ್ಲಿ ಜಲಪಾತದಿಂದ ಕೇವಲ 12 ಕಿ.ಮೀ. ದೂರದಲ್ಲಿ ಪ್ರಸಿದ್ಧ ಜೋಗ ಜಲಪಾತವೂ ಇದೆ. ಆದರೆ ಜೋಗವನ್ನು ದೂರದಿಂದಲೇ ಕಣ್ತುಂಬಿಕೊಳ್ಳಬೇಕು. ನಿಪ್ಲಿ ಹಾಗಲ್ಲ, ಎಲ್ಲಾ ಪ್ರವಾಸಿಗರನ್ನು ತನ್ನ ತೆಕ್ಕೆಗೆ ಸೆಳೆದುಕೊಳ್ಳುತ್ತದೆ.

ಪ್ರತಿಕ್ರಿಯಿಸಿ: feedback@sudha.co.in